KACM030027502016

C.C. 1283/2016 P.W-1

**ದಿನಾಂಕ ಃ07.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಎಸ್ ಎಸ್ ಪಿ ವಕೀಲರಿಂದ ಃ

ನಾನು ದಾವಣಗೆರೆಯ ಕೆ.ಬಿ.ಎಕ್ಸ್ ಟೆಷನ್ ನಲ್ಲಿ ಇದ್ದು, 3 ನೇ ಮುಖ್ಯ ರಸ್ತೆ, 1 ನೇ ಅಡ್ಡರಸ್ತೆ, ಜೈನ್ ದೇವಾಲಯ ಹತ್ತಿರ, ಕಿರುವಾಡಿ ಲೇಔಟ್ನಲ್ಲಿ ವಾಸವಾಗಿದ್ದೇನೆ. ಸದರಿ ವಿಳಾಸದ ಆಧಾರ್ ಕಾರ್ಡ್ ಇದೆಯಾ ಎಂದರೆ ಕೆ.ಬಿ.ಎಕ್ಸ್ ಟೆಷನ್ ನ ವಿಳಾಸದ ಆಧಾರ ಕಾರ್ಡ್ ಇದೆ. ನನ್ನ ಗಂಡನ ಹೆಸರು ಉಮಾಪತಿ.ಎಸ್ ಅವರ ಊರು ದೇವರ ಬೆಳಕೆರೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. ನನ್ನ ತಂದೆ ಮದುವೆ ಮಾಡಿಕೊಟ್ಟು 27 ವರ್ಷಗಳಾಗಿರುತ್ತದೆ. ನಾನು 27 ವರ್ಷಗಳಿಂದಲೂ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಎಷ್ಟು ವರ್ಷಕ್ಕೊಮ್ಮೆ ತಂದೆಯ ಮನೆಯ ಬರುತ್ತೀರಾ ಎಂದರೆ ತಿಂಗಳಿಗೊಮ್ಮೆ ಬರುತ್ತೇನೆ. ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ. ನನ್ನ ಗಂಡ ವ್ಯವಸಾಯ ಮತ್ತು ಹೈನುಗಾರಿಕೆ ಮಾಡುತ್ತಾರೆ.

ನನ್ನ ತಂದೆ ಚಿಕ್ಕಮಗಳೂರಿನಲ್ಲಿ ಬಾಳೇಹಳ್ಳಿಯಲ್ಲಿ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ ಇರುತ್ತಾರೆ. ನನ್ನ ಸಹೋದರಿ ಗೃಹಿಣಿಯಾಗಿದ್ದು, ಹಿರೇಮಗಳೂರಿನಲ್ಲಿ ವಾಸವಾಗಿದ್ದಾರೆ. ನನ್ನ ಸಹೋದರ ಜೀವಂತವಾಗಿದ್ದಾರೆ. ನನ್ನ ಸಹೋದರ ವ್ಯವಸಾಯ ಮಾಡುತ್ತಾರೆ. ನನ್ನ ತಂದೆಯ ಎಲ್ಲಾ ಕೆಲಸಗಳನ್ನು ಮತ್ತು ವ್ಯವಹಾರವನ್ನು ಅವರು ತೀರಿಕೊಂಡ ನಂತರ ನನ್ನ ಸಹೋದರ ನೋಡಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ತಂದೆಯ ವ್ಯವಹಾರ ಮತ್ತು ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ಸಹೋದರರಿಗೆ ಮಾತ್ರ ಗೊತ್ತಿದ್ದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಜೂನ್ ನಲ್ಲಿ ಈ ಪ್ರಕರಣ ದಾಖಲಿಸಿರುವ ಬಗ್ಗೆ ಗೊತ್ತಾಗಿರುತ್ತದೆ, ದಿನಾಂಕ ಹೇಳಲು ಆಗುವುದಿಲ್ಲ. ಜುಾನ್ ತಿಂಗಳಿನಲ್ಲಿ ನನ್ನ ತಂದೆ ಪ್ರಕರಣ ಹಾಕಬೇಕು ಎಂದು ಹೇಳಿದ್ದರು. ನನ್ನ ತಂದೆ ಯಾವ ಯಾವ ಬ್ಯಾಂಕಿನಲ್ಲಿ ಅಕೌಂಟ್ ಹೊಂದಿದ್ದರು ಎಂದರೆ ಸರಿಯಾಗಿ ಮಾಹಿತಿ ಇಲ್ಲ. ನನ್ನ ತಂದೆಯ ಆದಾಯ ಎಷ್ಟು ಇತ್ತು, ಎಂದರೆ ಸರಿಯಾಗಿ ಮಾಹಿತಿ ಇಲ್ಲ, ಆದಾಯ ತೆರಿಗೆ

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-3.pdf

ಪಾವಸುತ್ತಿದ್ದ ಬಗ್ಗೆ, ಲೇವಾದೇವಿಯ ಬಗ್ಗೆ ಮಾಹಿತಿ ಇದೆಯಾ ಎಂದರೆ ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ, ಲೇವಾದೇವಿ ವ್ಯವಹಾರ ಮಾಡಿದ ಬಗ್ಗೆ ಗೊತ್ತಿಲ್ಲ.

ನನ್ನ ತಂದೆ ದಿ:18.09.2019 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ನಾನು ನನ್ನ ತಂದೆಯ ಕಾನೂನುಬದ್ಧ ವಾರಸುದಾರರು ಎಂದು ಅರ್ಜಿಯನ್ನು ಯಾವಾಗ ಹಾಕಿರುತ್ತೀರಾ ಎಂದರೆ 3-6 ತಿಂಗಳ ಒಳಗೆ ಹಾಕಿದ್ದು, ದಿನಾಂಕ ಹೇಳಲು ಆಗುವುದಿಲ್ಲ. ನನ್ನ ವಕೀಲರಿಗೆ ನನ್ನ ತಂದೆ ಮೃತಪಟ್ಟ ಬಗ್ಗೆ ಅಕ್ಟೋಬರ್ 2019 ರಲ್ಲಿ ತಿಳಿಸಿರುತ್ತೇನೆ. ಆರೋಪಿಯ ಗಂಡನ ಹೆಸರು ಸುರೇಶ್ .ಅವರ ಸ್ವಂತ ಊರು ಯಾವುದು ಎಂದರೆ ದಾವಾಣಗೆರೆಯಲ್ಲಿ ವಾಸವಾಗಿದ್ದು, ನನ್ನ ವಾರಗಿತ್ತಿ ಪಾರ್ವತಮ್ಮ ಕಡೆಯಿಂದ ಸಂಬಂಧಿಕರಾಬೇಕು ಎಂದು ನುಡಿಯುತ್ತಾರೆ. ಸದರಿ ಪಾರ್ವತಮ್ಮ ಅವರ ಗಂಡ ಈಗ ಮೃತಪಟ್ಟಿರುತ್ತಾರೆ. ಪಾರ್ವತಮ್ಮ ನವರ ಮಕ್ಕಳಿಗೆ ಮದುವೆ ಆಗಿದ್ದು, ಬೇರೆ ಸ್ಥಳದಲ್ಲಿ ವಾಸವಾಗಿದ್ದಾರೆ. ಆರೋಪಿಯ ಸ್ವಂತ ಊರು ಯಾವುದು ಎಂದರೆ ಅವರೇ ದಾವಣಗೆರೆ ಎಂದು ಹೇಳಿದ್ದು, ನನಗೆ ವೈಯಕ್ತಿವಾಗಿ ಗೊತ್ತಿಲ್ಲ. ಆರೋಪಿ ಮತ್ತು ಆಕೆಯ ಗಂಡ ಮೊದಲು ಅಶೋಕ ರಸ್ತೆಯಲ್ಲಿ ವೀರಭದ್ರೇಶ್ವರ ಹಾರ್ಡ್ ವೇರ್ಸ್ ಇಟ್ಟಿದ್ದು ನಂತರ ಅಗಡಿ ರಸ್ತೆಯಲ್ಲಿ ಅಂಗಡಿ ತೆರೆದಿರುತ್ತಾರೆ.

ನನ್ನ ತಂದೆಗೆ ಆರೋಪಿ 10-12 ವರ್ಷಗಳಿಂದ ದಾವಣೆಗೆರೆಯಲ್ಲಿ ನಮ್ಮ ಮನೆಯಲ್ಲಿ ಪರಿಚಯವಾಗಿರುತ್ತಾರೆ. ಆರೋಪಿಯ ಅಂಗಡಿ ಇತ್ತು ಎಂದು ತೋರಿಸಲು ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಆರೋಪಿಯ ಮನೆಯ ವಿಳಾಸ ತರಳಬಾಳು ಬಡಾವಣೆ, ಸೆಂಟ್ ಜಾನ್ ಶಾಲೆಯ ಹಿಂಭಾಗ ಇದ್ದು, ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಆರೋಪಿಯ ಸ್ವಂತ ಮನೆ ದಾವಣಗೆರೆಯಲ್ಲಿ ಇತ್ತು. ವೀರಭದ್ರೇಶ್ವರ ಹಾರ್ಡ್ ವೇರ್ಸ್ ಈಗ ಇದೆಯಾ ಎಂದರೆ ಊರು ಬಿಟ್ಟು ಹೋಗಿದ್ದು, ಇದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಆರೋಪಿ ಸುಮಾರು 5-6 ವರ್ಷಗಳ ಹಿಂದೆ ಊರು ಬಿಟ್ಟು ಹೋಗಿದ್ದು, ನಿಖರವಾಗಿ ಗೊತ್ತಿಲ್ಲ.

ನನ್ನ ತಂದೆ ಜಮೀನು ಅಬಿವೃದ್ದಿ ಪಡಿಸಲು ಕೃಷಿ ಸಾಲ ಬ್ಯಾಂಕಿನಲ್ಲಿ ಮಾಡಿದ್ದರು ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-3.pdf

www.ecourtsindia.com

ಗೊತ್ತಿಲ್ಲ. ನನ್ನ ತಂದೆ ಸಾಲ ಮಾಡಿರುವ ಬಗ್ಗೆ ಗೊತ್ತಿಲ್ಲ. ನನ್ನ ತಂದೆ ಯಾವುದೇ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ನನ್ನ ತಂದೆಯ ನಡುವೆ ವ್ಯವಹಾರ ಬಾಳೇಹಳ್ಳಿಯ ನಮ್ಮ ಮನೆಯಲ್ಲಿ ದಿಃ05.02.2016 ರಂದು ಆಗಿತ್ತು. ಸದರಿ ದಿನದಂದು ಬೇರೆ ದಾಖಲಾತಿಗಳಿಗೆ ಸಹಿ ಪಡೆದಿದ್ದೀರಾ ಎಂದರೆ ನಿಪಿ-1 ಚೆಕ್ಕನ್ನು ಹೊರತುಪಡಿಸಿ, ಬೇರೆ ಯಾವುದೇ ದಾಖಲೆಗಳನ್ನು ಪಡೆದಕೊಂಡಿಲ್ಲ. ಹಣ ನೀಡಿದ ಬಗ್ಗೆ ಬೇರೆ ಯಾರು ಸಾಕ್ಷಿದಾರರು ಇರುವುದಿಲ್ಲ. ನಾನೇ ಸಾಕ್ಷಿದಾರರಾಗಿರುತ್ತೇನೆ. ಆ ದಿನ ನಾನು, ತಂದೆ ಮತ್ತು ಆರೋಪಿ ಮತ್ತು ಆರೋಪಿಯ ಜೊತೆ ಒಬ್ಬ ಕಾರಿನ ಚಾಲಕ ಬಂದಿದ್ದರು. ಸದರಿ ಕಾರಿನ ಚಾಲಕನ ಹೆಸರು ಮತ್ತು ವಾಹನ ಸಂಖ್ಯೆ ಗೊತ್ತಿಲ್ಲ.

ನಿಪಿ-1 ಯಾವ ವರ್ಷದ್ದು ಎಂದು ನನಗೆ ಗೊತ್ತಿಲ್ಲ. ನಿಪಿ-1 ಕೆನರಾ ಬ್ಯಾಂಕ್, ದಾವಣೆಗೆರೆಯ ಚೌಕಿಪೇಟೆ ಶಾಖೆಗೆ ಸೇರಿರುತ್ತದೆ. ನಿಪಿ-1 ರಲ್ಲಿರುವ ಸಹಿಗೂ ಮತ್ತು ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ-1 ನ್ನು ನಮ್ಮ ಮನೆಯಲ್ಲಿ ನನ್ನ ಎದುರಿನಲ್ಲಿಯೇ ಕಾರಿನ ಚಾಲಕನ ಮೂಲಕ ಬರೆಸಿ, ಆರೋಪಿ ಸಹಿ ಮಾಡಿ ನೀಡಿರುತ್ತಾರೆ. ಆರೋಪಿ ಏನು ಓದಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ವೀರಭದ್ರೇಶ್ವರ ಹಾರ್ಡ್ ವೇರ್ಸ್ ನ ಮಾಲೀಕರು ಯಾರು ಮತ್ತು ಯಾರ ಹೆಸರಿನಲ್ಲಿ ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ಚೆಕ್ಕು 2013 ರ ಚೆಕ್ಕು ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ರೂ.3 ಲಕ್ಷ ಹಣವನ್ನು ಕೊಡುವ ಶಕ್ತಿ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಮನೆ ಕಟ್ಟಲು ತಂದೆ ಮನೆಯಲು ಹಣ ಇಟ್ಟಿದ್ದರು ಎಂದು ನುಡಿಯುತ್ತಾರೆ. ಮನೆಕಟ್ಟಲು ಪರವಾನಗಿ ಮಾಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ತರಕಾರಿಯನ್ನು ಚಿಕ್ಕಮಗಳೂರಿನ ಎ.ಪಿ.ಎಂ.ಸಿ ಮಾರ್ಕೆಟ್ ಗೆ ನೀಡುತ್ತಿದ್ದು, ಆ ಬಗ್ಗೆ ಯಾವುದೇ ದಾಖಲೆ ಇಲ್ಲ.

<u>ಮುಂದುವರಿದ ಪಾಟೀ ಸವಾಲು ಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.</u>

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-3.pdf

www.ecourtsindia.com

KACM030027502016

C.C. 1283/2016 P.W-1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸ ಇ ಎ,

sd/-
(ಶ್ರೀ ಹರೀಶ್.ಜಿ)
2 ನೇ ಹೆಚ್ಚು ವರಿ ಸಿವಿಲ್ ನ್ಯಾಯಾಧೀಶರು,
ಪ್ರ ದ ನ್ಯಾದಂ ., ಚಿಕ್ಕಮಗಳೂರು

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-3.pdf